**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 22/2022**

| | | | | |
|---|---|---|---|---|
| ಹೆಸರು | ಃ | ಪ್ರಶಾಂತ್ ಕುಮಾರ್ ಕೆ.ವಿ. | ಸಿ.ಡಬ್ಲ್ಯೂ ಃ | 6 |
| ತಂದೆಯ ಹೆಸರು | ಃ | ವೆಂಕಟೇಶ ಮೂರ್ತಿ ಕೆ.ಸಿ. | ಪಿ.ಡಬ್ಲ್ಯೂ ಃ | 5 |
| ವಯಸ್ಸು | ಃ | 50 ವರ್ಷ | | |
| ಉದ್ಯೋಗ | ಃ | ಅರವಳಿಕೆ ತಜ್ಞರು, ಸಾರ್ವಜನಿಕ ಆಸ್ಪತ್ರೆ, ವೈದ್ಯಾಧಿಕಾರಿಗಳು | | |
| ವಾಸ ಸ್ಥಳ | ಃ | ಮಳವಳ್ಳಿ. | | |

**ಸಾಕ್ಷಿಗೆ ದಿನಾಂಕಃ 27.09.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

1. ದಿನಾಂಕ 07.07.2011 ರಿಂದ ಇಲ್ಲಿಯವರೆಗೆ ನಾನು ಮಳವಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 18.08.2021 ರಂದು ಸಂಜೆ 05-40 ರ ಸಮಯದಲ್ಲಿ ಚಾಸಾ 1 ರವರು ಕತ್ತಿನ ಸರ ಕಳ್ಳತನವಾದ ಸಂದರ್ಭ ವಾಹನದಿಂದ ಕೆಳಗೆ ಬಿದ್ದು ಗಾಯಗೊಂಡ ಸಂದರ್ಭ ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರೀಕ್ಷೆ ಮಾಡಲಾಗಿ ಅವರ ಹಣೆಯ ಎಡಭಾಗದಲ್ಲಿ 2 * 2 ಅಳತೆಯ ಕೆಂಪು ಬಣ್ಣದ ತರಚಿದ ಗಾಯ , ಮೂಗಿನ ಮೇಲೆ ಕೆಂಪು ಬಣ್ಣದ ತರಚಿದ ಗಾಯ 2 * 1 ಸೆ.ಮೀ, ಮೂಗಿನ ಕೆಳಭಾಗದಲ್ಲಿ ಕೆಂಪು ಬಣ್ಣದ ತರಚಿದ ಗಾಯ 4 * 1/2 ಸೆ.ಮೀ ಇರುತ್ತದೆ, ಬಲಗೈಯ ಮಣಿಕಟ್ಟು ಮೊಣಕೈ ಮಧ್ಯದ ಭಾಗದ ಮೇಲೆ ಕೆಂಪು ಬಣ್ಣದ ತರಚಿದ ಗಾಯ 4 * 4 ಸೆ.ಮೀ ಇರುತ್ತದೆ. ನಂತರ ಅವರಿಗೆ ಪ್ರಥಮ ಚಿಕಿತ್ಸೆ ನೀಡಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ.9 ಸಾಕ್ಷಿಯ ಸಹಿಯನ್ನು ನಿಪಿ.9 ಎ ಎಂದು ಗುರುತಿಸಲಾಯಿತು.

3. ಅದೇ ದಿನ, ಸುಮಾರು ಸಂಜೆ 5.50 ರ ಸಮಯದಲ್ಲಿ ಚಾ.ಸಾ.2 ರವರು ಮೇಲೆ ಹೇಳಿದ ಕಾರಣಕ್ಕಾಗಿ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ, ಅವರಿಗೆ

ಹಣೆಯ ಬಲ ಭಾಗದಲ್ಲಿ ಕೆಂಪು ಬಣ್ಣದ ತರಚಿದ ಗಾಯ 2 * 2 ಸೆ.ಮೀ, ಬಲಗೆನ್ನೆಯ ಕೆಂಪು ಬಣ್ಣದ ತರಚಿದ ಗಾಯ 3 * 3 ಸೆ.ಮೀ, ಬಲಭುಜದ ಮೇಲೆ ಕೆಂಪು ಬಣ್ಣದ ತರಚಿದ ಗಾಯ 3 * 3 ಸೆ.ಮೀ , ಎಡ ತೋರುಬೆರಳಿನ ಮೇಲೆ ಕೆಂಪು ಬಣ್ಣದ ತರಚಿದ ಗಾಯ 1 * 1 ಸೆ.ಮೀ, ಬಲ ಪಾದದ ಮೇಲೆ ಕೆಂಪು ಬಣ್ಣದ ತರಚಿದ ಗಾಯ 2 * 1 ಸೆ.ಮೀ ಗಾಯವಿದ್ದು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಡಲಾಗಿರುತ್ತದೆ. ಗಾಯಾಳು ಮಂಡ್ಯದ ಸಂಜೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಅಲ್ಲಿಯ ವರದಿಯಂತೆ ಬಲಗೈಯ ತೋಳಿನ ಮೂಳೆ ಮುರಿದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ.10 ಸಾಕ್ಷಿಯ ಸಹಿಯನ್ನು ನಿಪಿ.10 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

4. ಚಾ.ಸಾ. 1 ಮತ್ತು 2 ರವರು ನನಗೆ ಸರಗಳ್ಳತನ ಮಾಡಿದವರ ಚಹರೆಯ ಬಗ್ಗೆ ಹೇಳಿಲ್ಲ. ನಾನು ಪೊಲೀಸರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.